ಚೌಕಟ್ಟು ಮೀರಿ ಯಾರು ಕ್ರಮವನ್ನು ತೆಗೆದುಕೊಂಡಿರುತ್ತಾರೋ ಅವರ ಮೇಲೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳಬಹುದೋ ಆ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಯಾವುದೇ ಸ್ಪೇಟ್ ಲೆವೆಲ್ ಫೆಡರೇಶನ್ ಇರಬಹುದು, ಜಿಲ್ಲೆಯದ್ದಿರಬಹುದು, ಅಂಥದ್ದು ಯಾವುದಾದರೂ ಇದ್ದರೆ ನೀವು ತೆಗೆದುಕೊಳ್ಳುವುದಕ್ಕೆ ರೆಡಿ ಇದ್ದೀರ?

ಶ್ರೀ ಲಕ್ಷ್ಮಣ ಸವದಿ :– ತಂದು ಕೊಡಿ. ನಿಶ್ಚಿತವಾಗಿ ಅಂಥದ್ದು ಯಾವುದಾದರೂ ಇದ್ದರೆ ತಂದು ಕೊಡಿ. ಪರಿಶೀಲನೆಯನ್ನು ಮಾಡೋಣವಂತೆ.

ಶ್ರೀ ಹೆಚ್.ಡಿ.ರೇವಣ್ಣ :– ಓ.ಕೆ., ತಂದುಕೊಡುತ್ತೇವೆ.

68(135) ಶ್ರೀ ಬಾಲಕೃಷ್ಣ (ಮಾಗಡಿ)

ಪಿ. ಎಮ್. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಆ ಪೈಕಿ ಯಾವ ಯಾವ ಕೇಂದ್ರಗಳಿಗೆ ಕಟ್ಟಡಗಳ ಕೊರತೆ ಇದೆ (ವಿವರ ನೀಡುವುದು);

ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ: 395 131 ಕೇಂದ್ರಗಳಿಗೆ ಕಟ್ಟಡಗಳ ಕೊರತೆ ಇದೆ (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಕೊರತೆ ಇರುವ ಕಟ್ಟಡಗಳ ನಿರ್ಮಾಣಕ್ಕೆ ಈಗಾಗಲೇ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ;

2008–09ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳಡಿ–11, ನಬಾರ್ಡ್–13 ರಡಿ ನಬಾರ್ಡ್–12 ರಡಿ 5 ಹಾಗೂ ಇಲಾಖಾ ಅನುದಾನದಡಿ–5 ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಇ) ಹಾಗಿದ್ದಲ್ಲಿ, ಈ ಕಟ್ಟಡಗಳ ಕೊರತೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ನಿವೇಶನ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಅನುಬಂಧ

ಕಟ್ಟಡಗಳು ಇಲ್ಲದಿರುವ ಅಂಗನವಾಡಿ ಕೇಂದ್ರಗಳು

1.	ಮಾಯನಾಯಕನಹಳ್ಳಿ	33.	ಮರುಳಬೇವನಪುರ
2.	ಬಸವನಪಾಳ್ಯ	34.	ಅತ್ತಿಮರದಪಾಳ್ಯ
3.	ಶ್ರೀಪತಿಹಳ್ಳಿ	35.	ಎಳೆಗೆಹಳ್ಳಿ ಕಾಲೋನಿ

4.	ತಾಳೇಕೆರೆ	36.	ಎಳಿಗೆಹಳ್ಳಿ
5.	ದುಬ್ಬಗಟ್ಟ	37.	ಕೆಂಪಾಪುರ
6.	ಬೆಸ್ತರಪಾಳ್ಯ	38.	ಮರಿಯಪ್ಪನಪಾಳ್ಯ
7.	ಮಾಯಸಂದ್ರ	39.	ಎ.ಕೆ. ಲಾಯ
8.	ದೊಡ್ಡಹಳ್ಳಿ	40.	ಸಾತನೂರು
9.	ಬೀಚನಹಳ್ಳಿ	41.	ಕುದೂರು ರಾಮಮಂದಿರ
10.	ಅಡಲಿಂಗನಪಾಳ್ಯ	42.	ಕುದುರು–2(ಕೋಟೆಬಿದಿ)
11.	ಹುಳ್ಚೇನಹಳ್ಳಿ	43.	ನಾರಸಂದ್ರ ಹೊಳಪಾಳ್ಯ
12.	ಕೋಡಿಹಳ್ಳಿ	44.	ಹಾಲಶೆಟ್ಟಿಹಳ್ಳಿ
13.	ಚೀಲೂರು	45.	ಕೋಡಿಹಳ್ಳಿ ಕಾಲೋನಿ
14.	ಹಂಚಿಕುಪ್ಪೆ	46.	ಗೊಲ್ಲಹಳ್ಳಿ
15.	ಅಜ್ಜನಹಳ್ಳಿ	47.	ಉಪ್ಪಾರ್ತಿ
16.	ಅತ್ತಿಂಗೆರೆ ಬಿ.	48.	ಹೂಜೇನಹಳ್ಳಿ
17.	ರಾಜೀವಗಾಂಧಿನಗರ	49.	ಅರೆಪಾಳ್ಯ
18.	ಹನುಮಂತಪುರ	50.	ದಮ್ಮನಕಟ್ಟೆ
19.	ಮಲ್ಲಸಂದ್ರ	51.	ಮರಲಗೊಂಚಲ
20.	ಚಂಡಿನಪಾಳ್ಯ	52.	ಚಿಕ್ಕತೊರೆಪಾಳ್ಯ
21.	ದೋಣಗುಪ್ಪೆ	53.	ಗೊಲ್ಲರಪಾಳ್ಯ
22.	ಬಸವನಗುಡಿಪಾಳ್ಯ	54.	ಸೇವಾನಗರ
23.	ಬಸವಾಪಟ್ಟಣ	55.	ನಾಯಕನಪಾಳ್ಯ
24.	ಹೊನ್ನಯ್ಯನಪಾಳ್ಯ	56.	ಯಾಗನಹಳ್ಳಿ
25.	ಅಗಲಕೋಟೆ	57.	ತ್ಯಾಗದೆರೆಪಾಳ್ಯ
26.	ಹೆಚ್.ಹೆಚ್. ಜಿ.ಪಾಳ್ಯ	58.	ಮತನದೊಡ್ಡಿ
27.	ಕಪನಿಗೌಡನಪಾಳ್ಯ	59.	ಅಜ್ಜನಹಳ್ಳಿ ಗೊಲ್ಲರಹಟ್ಟಿ
28.	ಸಣ್ಣೇನಹಳ್ಳಿ	60.	ಕುತ್ತಿನಗೆರೆ
29.	ಗಂಗೋನಹಳ್ಳಿ	61.	ಹೊಸದೊಡ್ಡಿ
30	ಚಿಕ್ಕಹಳ್ಳಿ ಬಿ.	62.	ವಾಜರಹಳ್ಳಿ
31	ಹೊಸಪಾಳ್ಯ	63.	ತೋರೆರಾಮನಹಳ್ಳಿ
32	ಅಗಲಕೋಟೆಗೊಲ್ಲರಹಟ್ಟಿ	64.	ಅದರಣಗಿ ಎ.
65.	ಹೊಸಹಳ್ಳಿ	99.	ಕೂಟಗಲ್–1
66.	ದೊಳ್ಚೇನಹಳ್ಳಿ	100.	ಕೊನೆಮುದ್ದನಹಳ್ಳಿ
67.	ಕಂಕೆರಪಾಳ್ಯ	101.	ತಿರುಮಲೇಗೌಡನದೊಡ್ಡಿ
68.	ಕೆಂಪಾಪುರ	102.	ದೊಡ್ಡ ಗಂಗವಾಡಿ–1
69.	ಬೆಟ್ಟಹಳ್ಳಿ	103.	ದೊಡ್ಡ ಗಂಗವಾಡಿ–2
70.	ಹೊಸಮಸೀದಿ ಎ	104.	ಶೀರೇಗೌಡನದೊಡ್ಡಿ

71.	ಹೊಸ ಮಸೀದಿ ಬಿ.	105.	ಕ್ಯಾಸಪಾಳ್ಯ
72.	ಬಾಬುಜಗಜೀವನರಾಂನಗರ	106.	ಚಾಮನಹಳ್ಳಿ
73.	ಹಳೇ ಮಸೀದಿ ಬಿ.	107.	ಹೋಂಬೇಗೌಡನದೊಡ್ಡಿ
74.	ರಾಮಮಂದಿರ	108.	ಬಿಡದಿ–3
75.	ಕಲ್ಯಾಗೇಟೆ ಬಿ.	109.	ಮುತ್ತುರಾಯನಗುಡಿಪಾಳ್ಯ
76.	ಮಾಗಡಿ ಸಿ.	110.	ಸಿದ್ದಾಬೋವಿಪಾಳ್ಯ
77.	ಮಾಗಡಿ ಎನ್.ಇ.ಎಸ್.	111.	ಎಸ್ ವಿ ಟಿ ಕಾಲೋನಿ
78.	ತಿರುಮಲೆ ಎ.	112.	ದ್ಯಾವಲಿಂಗಯ್ಯನಪಾಳ್ಯ
79.	ತಿರುಮಲೆ ಬಿ.	113.	ಶ್ಯಾನುಮಂಗಲ
80.	ಕುರುಬರಬೀದಿ	114.	ಹನುಮಂತನಗರ
81.	ಗಮ್ಮಸಂದ್ರ	115.	ಹೊಸದೊಡ್ಡಿ
82.	ಮಾಗಡಿ ಮುಖ್ಯರಸ್ತೆ	116.	ಬನಿಗಿರಿ
83.	ಹೊಸಪೇಟೆ.ಬಿ.	117.	ಕೋಡಿಹಳ್ಳಿ
84.	ಕಲ್ಯಾಗೇಟೆ ಎ.	118.	ಕಂಚುಗಾರನಹಳ್ಳಿ ಗುಂಡುತೋಪು
85.	ಹೊಂಬಾಳಮ್ಮನಪೇಟೆ ಎ.	119.	ಕೆ.ಜಿ.ಗೊಲ್ಲರಪಾಳ್ಯ
86.	ಹೊಂಬಾಳಮ್ಮನಪೇಟೆ ಬಿ.	120.	ಕೋಡಿಯಾಲ
87.	ಮಲವರಪಾಳ್ಯ	121.	ಹೊಸೂರು ಗೊಲ್ಲಹಳ್ಳಿ
88.	ಕಲ್ಲಾರಪಾಳ್ಯ	122.	ಕಂಚುಗಾರನಹಳ್ಳಿ
89.	ಪರಂಗಿಚಿಕ್ಕನಪಾಳ್ಯ	123.	ಗುಂಗರಹಳ್ಳಿ
90.	ವ್ಯಾಸರಾಯನಪಾಳ್ಯ	124.	ಜ್ಯೋಗಿದೊಡ್ಡಿ
91.	ನೇತೇನಹಳ್ಳಿ	125.	ಕೋಳಮಾರನಕುಪ್ಪೆ
92.	ಉಡುವಗೆರೆ	126.	ತಿಬ್ಬೇಗೌಡನದೊಡ್ಡಿ
93.	ಸೊಣ್ಣೇನಹಳ್ಳಿ	127.	ಇರುಳಿಗರದೊಡ್ಡಿ
94.	ಜ್ಯೋತಿನಗರ	128.	ರಾಮನಹಳ್ಳಿ
95.	ವಿದ್ಯಾನಗರ	129.	ಅಬ್ಬನಕುಪ್ಪೆ ಕಾಲೋನಿ
96	ಕೆಂಪಸಾಗರ	130.	ಆಲಮರದದೊಡ್ಡಿ
97	ವರದೋಹಳ್ಳಿ	131.	ಬಿಡದಿಗೊಲ್ಲಹಳ್ಳಿ
98	ಕೊಂಡಹಳ್ಳಿ		

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೇ, ನಾನು ಮಾಗಡಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಂಗನವಾಡಿ ಕೇಂದ್ರಗಳ ಬಗ್ಗೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು 131 ಅಂಗನವಾಡಿಗಳು ಸ್ವತ ಕಟ್ಟಡಗಳಲ್ಲಿ ನಡೆಯುತ್ತಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನಿವೇಶನ ಮತ್ತು ಅನುದಾನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದೀರಿ. ನೀವು ವರ್ಷಕ್ಕೆ 5–6

ಕಟ್ಟಡಗಳನ್ನು ಕೊಡುತ್ತಿರಿ. 131 ಕಟ್ಟಡಗಳು ಕಟ್ಟಿಸಿ ಮುಗಿಯಬೇಕಾದರೆ ಎಷ್ಟು ವರ್ಷಗಳಿಗೆ ಆಗುತ್ತದೆ? ಸಣ್ಣ ಮಕ್ಕಳಿಗೆ ಆಹಾರ ತಯಾರು ಮಾಡಿಕೊಡುವಂತಹ ಜಾಗ. ನಮ್ಮಲ್ಲಿ ಅಂಗನವಾಡಿ ಕೇಂದ್ರಗಳು ಎಲ್ಲಿ ನಡೆಯುತ್ತವೆ ಎಂದರೆ ಹಳ್ಳಿಯಲ್ಲಿ ಮರದ ಕೆಳಗಡೆ ನಡೆಯುತ್ತವೆ. ಇದಕ್ಕೆ ಹೆಚ್ಚಿನ ರೀತಿಯಲ್ಲಿ ಜವಾಬ್ದಾರಿ ತೆಗೆದುಕೊಂಡು ಇದಕ್ಕೆ ಅನುದಾನ ಕೊಟ್ಟು ಈ ವರ್ಷ complete ಮಾಡಿಕೊಡುತ್ತೀರಾ?

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ :– ನಾವು ಈಗಾಗಲೇ ಇಲಾಖಾ ವತಿಯಿಂದ ಕೇಂದ್ರಕ್ಕೆ ಬೇಡಿಕೆ ಇಟ್ಟಿದ್ದು, 2,000 ಅಮಗನವಾಡಿ ಕೇಂದ್ರಗಳನ್ನು ಬೇಕಾಗಿದ್ದು, ಅದರ ಬಗ್ಗೆ ನಮ್ಮ ಇಲಾಖಾ ಕಾರ್ಯದರ್ಶಿಯವರು ಚರ್ಚೆ ಮಾಡಿಕೊಂಡು ಬರುವುದಕ್ಕೆ ಹೋಗಿದ್ದರೆ. ಅವುಗಳು ಮಂಜೂರಾಗುವ ಸಾಧ್ಯತೆಯಿರುವುದರಿಂದ ಅದನ್ನು ಪರಿಗಣಿಸಿ ಹೆಚ್ಚಿನ ಕಟ್ಟಡಗಳು ಆಗುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ನಾವು ಕಟ್ಟಡಗಳು ಬೇಕೆಂದು ಕೇಳುತ್ತಿದ್ದು, ಅದಕ್ಕೆ ನಮ್ಮ ಸರ್ಕಾರ ಏನು ಮಾಡುತ್ತಿದೆ? ನೀವು ಕೇಂದ್ರ ಸರಾರದವರನ್ನು ಕೇಳಿದ್ದೇವೆ, ಅವರು ಕೊಟ್ಟರೆ ಕೊಡುತ್ತೇವೆಂದು ಹೇಳುತ್ತಿದ್ದೀರಿ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ :– ನಾವು ಅನುದಾನ ಲಭ್ಯತೆಯ ಆಧಾರದ ಮೇಲೆ ಕಟ್ಟಡಗಳನ್ನು ಕೊಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಪ್ರತಿ ವರ್ಷ ಐದು ಕಟ್ಟಡಗಳನ್ನು ಕೊಡುತ್ತೇವೆಂದರೆ 131 ಕೇಂದ್ರಗಳಲ್ಲಿ ಕಟ್ಟಡಗಳನ್ನು ಎಷ್ಟು ವರ್ಷಕ್ಕೆ ಮುಗಿಸಿ ಕೊಡುತ್ತೀರಿ?

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ :– ಅದರಲ್ಲಿ ಮಾನ್ಯ ಸದಸ್ಯರ ಜವಾಬ್ದಾರಿ ಇರುತ್ತದೆನ್ನುವುದನ್ನು ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ನಾವು ಕೊಡುತ್ತೇವೆ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ :– ಕನಿಷ್ಟ ನಿಮ್ಮ ಅನುದಾನವೇ ಅತೀ ಹೆಚ್ಚಿನ ಅಂಶ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದರ ಜೊತೆಗೆ ನಿಮ್ಮ ಸಹಕಾರದಿಂದ ನಿಮ್ಮ ಕ್ಷೇತ್ರಕ್ಕೆ ಅನುಕುಲವಾಗುವುದು ಒಂದು ವಿಷಯವಾದರೆ, ಇಲಾಖೆಯಿಂದ ಕೊಡುತ್ತೇವೆ. ಕೇಂದ್ರ ಸರ್ಕಾರ ಕೂಡ ಕೊಡುತ್ತದೆ, ನಬಾರ್ಡ್ ವತಿಯಿಮದ ಕೂಡ ಕೊಡುತ್ತಿದ್ದೇವೆ ಮತ್ತು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೂಡ ಈ ಒಂದು ಕಟ್ಟಡಗಳನ್ನು ಕೊಡುವಂತಹ ಅವಕಾಶವಿರುವುದರಿಂದ ಈ ವರ್ಷ ಕನಿಷ್ಟ ಒಂದೊಂದು ಕ್ಷೇತ್ರಕ್ಕೆ 20 ಕ್ಕಿಂತ ಹೆಚ್ಚಿನ ಕಟ್ಟಡಗಳು ಬರುವಮತಹ ಲಭ್ಯತೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೇ, ನಬಾರ್ಡ್‌ನಿಂದ ಕೊಡುತ್ತಿದ್ದಾರೆಂದು ಹೇಳಿದಿರಿ. ನಬಾರ್ಡ್‌ನಿಂದ ಹಣವನ್ನೇ ಕೊಡುತ್ತಿಲ್ಲ. ನಬಾರ್ಡ್ 12–13ರಲ್ಲಿ ಇವತ್ತಿನವರೆಗೂ ಹಣ ಬಂದಿಲ್ಲ. ತಾವು ಕೂಡಲೇ ಹಣ ರಿಲೀಸ್ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ :– ತಮ್ಮ ಮಾಹಿತಿಗೋಸ್ಕರ ಹೇಳುವುದಾದರೆ, ಪ್ರತಿ ಕ್ಷೇತ್ರದ ಪಟ್ಟಿ ಲಭ್ಯವಿದೆ. ಅದನ್ನು ಮಾನ್ಯ ಅಧ್ಯಕ್ಷರ ಮೂಲಕ ಒದಗಿಸಿಕೊಡಲಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ :–ನಾನು ಹೇಳುತ್ತಿರುವುದೇನೆಂದರೆ, ನಬಾರ್ಡ್‌ನಿಂದ ಹಣ ರಿಲೀಜ್ ಆಗುತ್ತಿಲ್ಲ, ಕೆಲಸವಾಗುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಬೇರೆ ವಿಚಾರವಾಗಿ ಮಾತನಾಡುವಾಗ ಇದೇ ವಿಚಾರದ ಉದ್ದೇಶವನ್ನು ಇಟ್ಟುಕೊಂಡು ನಬಾರ್ಡ್‌ನಲ್ಲಿ ಹಣ ಬಿಡುಗಡೆ ಯಾಗುತ್ತಿಲ್ಲವೆಂದು ಮಾತನಾಡಿದರು.

ಅಧ್ಯಕ್ಷರು :– ಈಗ ವಿಷಯ divert ಆಗುವುದು ಬೇಡ.

ಶ್ರೀ ಹೆಚ್.ಸಿ ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೇ, ನಬಾರ್ಡ್‌ನಿಂದ ಹಣ ಬಿಡುಗಡೆ ಯಾಗುತ್ತಿಲ್ಲ. 12 ಮತ್ತು 13 ರಡಿಯಲ್ಲಿ ಇವತ್ತು ಹಣ ಬಿಡುಗಡೆಯಾಗಿಲ್ಲ.

ಶ್ರೀ ಸಿ.ಎಂ. ಉದಾಸಿ :– ಈಗ 24 ಕೋಟಿ ರೂಪಾಯಿಯ ಬಿಲ್ ಕೊಡುವುದು ಮಾತ್ರ ಬಾಕಿ ಇದೆ. ಇನ್ನು ಎಲ್ಲಾ ಬಾಕಿ payment ಮಾಡಿದ್ದೇವೆ. 24 ಕೋಟಿ ರೂಪಾಯಿ ಕೂಡ ಈಗ ಆಗುತ್ತಿದೆ. ನಿಮ್ಮ ಹತ್ತಿರ ಏನಾದರೂ ದಾಖಲೆ ಇದ್ದರೆ ತಂದುಕೊಡಿ, ಅದನ್ನು ಪರಿಶೀಲನೆ ಮಾಡಿ ಉತ್ತರ ಕೊಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಲೋಕೋಪಯೋಗಿ ಸಚಿವರಿಗೆ ಒಂದು ಪ್ರಶ್ನೆ ಕೇಳುವುದೇನೆಂದರೆ, ಅವರೇ ವಿಚಾರ ಎತ್ತಿದ್ದಾರೆ. ತುಂಬಾ ಸಂತೋಷ. ನಬಾರ್ಡ್‌ಗೆ ಸಂಬಂಧಪಟ್ಟ ಹಾಗೆ ಹಾಸನ ಜಿಲ್ಲೆಯಲ್ಲಿ ಎಷ್ಟು ಹನ pending ಇದೆ, ಕಳೆದ ಆರು ತಿಂಗಳಿನಿಂದ ಎಷ್ಟು ಕೊಟ್ಟಿದ್ದೀರಿ ಎನ್ನುವುದನ್ನು ಸದನದ ಗಮನಕ್ಕೆ ತೆಗೆದುಕೊಂಡು ಬನ್ನಿ. ಹಾಸನ ಜಿಲ್ಲೆಯಲ್ಲಿ pending ಇಲ್ಲವೆಂದರೆ, ನಾನು MLA ಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇನೆ. ಮಾನ್ಯ ಲೋಕೋಪಯೋಗಿ ಸಚಿವರು ಸದನವನ್ನು ತಪ್ಪುದಾರಿಗೆ ತೆಗೆದುಕೊಂಡು ಹೋಗುವುದು ಬೇಡ. ದಯಮಾಡಿ ಹೇಳಲಿ, ಅವರು ಮಾಹಿತಿಯನ್ನು division wise ಹೇಳಲಿ.

ಶ್ರೀ ಸಿ.ಎಂ.ಉದಾಸಿ :– ಇವರು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಲಿ. 24 ಕೋಟಿ ರೂಪಾಯಿ ಮಾತ್ರ ಬಾಕಿ ಇದೆಯೆಂದು ನಾನು ಹೇಳಿದ್ದೇನೆ. ಇವತ್ತು ಬಿಲ್ pending ಇರುವುದ 24 ಕೋಟಿ ರೂಪಾಯಿ ಮಾತ್ರ.

ಶ್ರೀಹೆಚ್.ಸಿ. ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ, ದಯಮಾಡಿ, ಆರು ತಿಂಗಳಿನಿಂದ ಎಷ್ಟು payment ಆಗಿದೆ ಎಂದು ಹೇಳಲಿ.

ಶ್ರೀ ಸಿ.ಎಂ. ಉದಾಸಿ :– 54 ಕೋಟಿ ರೂಪಾಯಿ ಆಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಎಲ್ಲಿ ಆಗಿದೆ? ಒಂದು ರೂಪಾಯಿ ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಎದ್ದುನಿಂತುಕೊಂಡು ಹೇಳುತ್ತಿರುವುದಕ್ಕೆ ಕೇಳುತ್ತಿದ್ದೇವೆ. ನಬಾರ್ಡ್‌ನಲ್ಲಿ ಹಣ ಬಿಡುಗಡೆ ಮಾಡಿಸುವುದಕ್ಕೆ 5% ಹಣ ಕೊಡಬೇಕಾಗುತ್ತದೆ. ಅದನ್ನು chief engineer. Secretary ತೆಗೆದುಕೊಳ್ಳುತ್ತಾನೋ ಗೊತ್ತಿಲ್ಲ, ನಮ್ಮ ಕಂಟ್ರಾಕ್ಟರ್‌ಗಳು 5% ಕೊಡಿ ಎಂದು ಕೇಳುತ್ತಾರೆ. ಯಾರು ಅವರು suspend ಮಾಡಿ. ನಾನು ಇದ್ದುದ್ದನ್ನು ಇದ್ದ ಹಾಗೆ ಹೇಳಿದೆ. ನಾನು ಮಂತ್ರಿಗಳು ಮಾಡುತ್ತಿದ್ದಾರೆಂದು ಹೇಳುತ್ತಿಲ್ಲ. ಇದರ ಮೇಲೆ ತನಿಖೆ ಮಾಡುವುದಕ್ಕೆ ರೆಡಿ ಇದ್ದಾರಾ ಕೇಳಿ.

ಶ್ರೀ ಸಿ.ಎಮ. ಉದಾಸಿ ;– ಇದರ ಬಗ್ಗೆ ಆಧಾರ ಸಹಿತವಾಗಿ, ನಿವು ಇಂತಹವರ ಮೇಲೆ ಆರೋಪ ಮಾಡಿ ಬರೆದುಕೊಡಿ, ಸುಮ್ಮನೆ ಮಾತನಾಡುವುದಕ್ಕೆ ಹೋಗಬೇಡಿ. ಇಂತಹ ಅಧಿಕಾರಿ ಅಥವಾ ಇಂತಹ ವ್ಯಕ್ತಿ ಎಂದು ಬರೆದುಕೊಡಿ.

ಶ್ರೀ ಹೆಚ್.ಡಿ. ರೇವಣ್ಣ :– ನಮ್ಮ ಜಿಲ್ಲೆಯ ಬಗ್ಗೆ ನಾನೇ ಬರೆದುಕೊಡುತ್ತೇನೆ.

ಶ್ರೀ ಸಿ.ಎಂ,ಉದಾಸಿ :– ಬರೆದುಕೊಡಿ.

ಆ) ತಡೆ ಹಿಡಿಯಲಾದ ಪ್ರಶ್ನೆಗಳು

ಪಟ್ಟಣ ಪಂಚಾಯತ್ ರಚನೆಗಳ ಬಗ್ಗೆ

211 ಶ್ರೀ.ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ)

ಮಾನ್ಯ ಪೌರಾಡಳಿತ ಸಚಿವರು

ಅ) ಪಟ್ಟಣ ಪಂಚಾಯತ್‌ಗಳ ರಚನೆಗೆ ಇರಬೇಕಾದ ಕಾನೂನು ಅಂಶಗಳಾವುವು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಮ 349ರನ್ವಯ ಇ ಕೆಳಕಂಡ ಅಂಶಗಳನ್ವಯ ರಚನೆ ಮಾಡಬೇಕಾಗುತ್ತದೆ:–

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು
2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾನದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.